

# ಹಾಯ್ ಹಾಯ್ ಹನಾಯ್!

**ಹನಾಯ್ ಎಂದರೆ ನದಿಗಳ ನಡುವೆ ರೂಪುಗೊಂಡ ನಗರ. ವಿಯೆಟ್ನಾಂನ ಈ ರಾಜಧಾನಿ ನಗರ ಮೂರು ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಸ್ಮಾರಕಗಳು, ಸರೋವರಗಳು, ನದಿಗಳು, ದೇವಾಲಯಗಳು, ಮ್ಯೂಸಿಯಂಗಳು, ವಿಶ್ವವಿದ್ಯಾಲಯಗಳು, ಉದ್ಯಾನವನಗಳು, ಕೊಳ್ಳುಬಾಕರಿಗೆ ಮಾಲ್‌ಗಳು – ಪ್ರವಾಸಿಗರ ಬಹುರುಚಿಯನ್ನು ತಣಿಸುವಂತಿದೆ ಹನಾಯ್.**

■ ಡಿ.ಜಿ. ಮಲ್ಲಿಕಾರ್ಜುನ

‘ಅರೆ! ನೋಡಿ ಇಲ್ಲಿ, ಕನ್ನಡದಲ್ಲಿ ಬರೆದಿದ್ದಾರೆ!” ಎನ್ನುತ್ತಾ ಸಹಪ್ರವಾಸಿಗರೊಬ್ಬರು ನಮ್ಮ ಗಮನ ಸೆಳೆದರು. ಕನ್ನಡ ನಾಡಿನಿಂದ ಮೂರು ಸಾವಿರ ಕಿ.ಮೀ. ದೂರದ ವಿಯೆಟ್ನಾಂ ದೇಶದ ರಾಜಧಾನಿ ಹನಾಯ್‌ನಲ್ಲಿ ‘ಊಟ ರೆಡಿ’ ಎಂದು ಕನ್ನಡದಲ್ಲಿ ಬರೆದಿರುವುದನ್ನು ಕಂಡಾಗ ಆಗುವ ಸಂತೋಷಕ್ಕೆ ಎಣೆಯುಂಟೆ?

ಕನ್ನಡದ ಜೊತೆಗೆ ತೆಲುಗು, ತಮಿಳು, ಮಲಯಾಳಂ ಮತ್ತು ಹಿಂದಿಯಲ್ಲಿ ಕೂಡ ‘ಊಟ ರೆಡಿ’ ಎಂಬರ್ಥದಲ್ಲಿ ಬರೆದಿದ್ದರು. ಭಾರತದ ತುಣುಕೊಂದನ್ನು ಅಲ್ಲಿ ನಾವು ಕಂಡೆವು. ತಮಿಳುನಾಡಿನಿಂದ ಬಂದವರೊಬ್ಬರು ಅಲ್ಲಿ ಹೋಟೆಲನ್ನು ನಡೆಸುತ್ತಿದ್ದಾರೆ. ಊಟಕ್ಕೆ ಬಂದಿದ್ದ ಆಂಧ್ರ ಮೂಲದ ಯುವಕರನ್ನು ಮಾತನಾಡಿಸಿದೆವು. ಇಂಗ್ಲಿಷ್ ಶಿಕ್ಷಕರಾಗಿ ಅವರಿಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದರು.

ಹನಾಯ್‌ನಲ್ಲಿ ಮಾಜಿ, ದಾಲ್ ಚೀನಿ, ನಮಸ್ತೆ, ಜೈಕಾ ಮುಂತಾದ 25ಕ್ಕೂ ಹೆಚ್ಚು ಭಾರತೀಯ ರೆಸ್ಟೋರೆಂಟ್‌ಗಳಿವೆ. ರಸ್ತೆ ಬದಿಯಲ್ಲಿ ಬಟ್ಟೆ, ಬ್ಯಾಗು, ಪರ್ಸು ಮುಂತಾದುವುಗಳನ್ನು ಮಾರಾಟ ಮಾಡುವ ವಿಯೆಟ್ನಾಮಿ ಹೆಣ್ಣುಮಕ್ಕಳು, ಸರಿಯಾಗಿ ಇಂಗ್ಲಿಷ್ ಬರದಿದ್ದರೂ, ನಮಗೆ ನಮ್ಮ 500 ರೂಪಾಯಿ ನೋಟನ್ನು ತೋರಿಸಿ, ‘ನಿಮ್ಮ ಹಣವನ್ನೂ ತೆಗೆದುಕೊಳ್ಳುತ್ತೇವೆ, ವ್ಯಾಪಾರ ಮಾಡಿ’ ಎಂದು ಅವರ ಭಾಷೆಯಲ್ಲಿ ಹೇಳುತ್ತಿದ್ದರು. ಭಾರತದ ರೂಪಾಯಿಯೂ ವಿಯೆಟ್ನಾಂನಲ್ಲಿ ಚಲಾವಣೆಯಾಗುವುದನ್ನು ಕಂಡು ಹೆಮ್ಮೆ ಅನ್ನಿಸಿತು.

## ರಾಜಧಾನಿ ನಗರದ ಪ್ರಭಾವಳಿ

1902ರಿಂದ 1953ರವರೆಗೆ ಹನಾಯ್, ಫ್ರೆಂಚ್ ಆಳ್ವಿಕೆಯ ಇಂಡೋಚೀನಾ ಪ್ರದೇಶದ ರಾಜಧಾನಿಯಾಗಿತ್ತು. 1945ರ ಆಗಸ್ಟ್‌ನಲ್ಲಿ ನಡೆದ ಕ್ರಾಂತಿಯಲ್ಲಿ ವಿಯೆಟ್ನಾಂ ರಾಷ್ಟ್ರಪಿತ ಹೊ ಚಿ ಮಿನ್ ನೇತೃತ್ವದ ‘ವಿಯೆಟ್ ಮಿನ್ ಪಡೆ’ ಹನಾಯ್ ಅನ್ನು ವಶಪಡಿಸಿಕೊಂಡು, ‘ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ವಿಯೆಟ್ನಾಂ’ಗೆ ಹನಾಯ್ ರಾಜಧಾನಿ ಎಂದು ಘೋಷಿಸಿದರು. ಆದರೂ 1954ರವರೆಗೂ ಫ್ರೆಂಚ್ ಪಡೆಗಳೊಂದಿಗೆ ನಿರಂತರ ಘರ್ಷಣೆ–ಯುದ್ಧ ನಡೆಯುತ್ತಲಿತ್ತು.